

ನೆಲದಾಳದಲ್ಲಿ ಸುರಂಗ ಇರುವುದು ತಿಳಿಯದಂತೆ, ನೆಲದ ಮೇಲೆ ದಟ್ಟವಾದ ಮರಗಿಡಗಳಿಂದ ಆವೃತವಾದ ಕಾಡು

# ಕು ಚಿ ಸುರಂಗಗಳೆಂಬ ನೆಲದಾಳದ ಬೆರಗು

**ವಿಯೆಟ್ನಾಮ್ ಜನರ ಬುದ್ಧಿಮತ್ತೆ ಹಾಗೂ ಯುದ್ಧತಂತ್ರ ನೈಪುಣ್ಯದ ಕುರುಹುಗಳಂತಿರುವ 'ಕು ಚಿ ಸುರಂಗಗಳು' ಈಗ ಸ್ಮಾರಕಗಳಾಗಿ ರೂಪಾಂತರಗೊಂಡಿವೆ. ಅಮೆರಿಕದ ಪ್ರಬಲ ಪಡೆಗಳಿಗೆ ವಿಯೆಟ್ನಾಮೀಯರು ಸಡ್ಡು ಹೊಡೆಯಲು ಈ ಸುರಂಗಗಳು ಶಕ್ತಿತಾಣಗಳಾಗಿದ್ದವು.**

**■ ಡಿ.ಜಿ. ಮಲ್ಲಿಕಾರ್ಜುನ**

'ನಸುಕಿನಲ್ಲಿ ಕು ಚಿ ಸುರಂಗ ನೋಡಲೆಂದು ನಾವು ಸೈಗಾನ್ ಪಟ್ಟಣದಿಂದ ಹೊರಬಂದಂತೆ ಭೂಮಿಯ ರೂಪುರೇಷೆ ಬದಲಾಗುತ್ತಾ ಬಂದು, ಕ್ರಮೇಣ ನೋಡಿದಲ್ಲೆಲ್ಲ ದೊಡ್ಡ ಮತ್ತು ಬೃಹದಾಕಾರದ ಬಾಂಬು ಕುಳಿಗಳು ಮತ್ತು ವಿಶಾಲವಾದ ಸಿಡಿಮದ್ದಿನಿಂದಾದ ಗುಂಡಿಗಳು ಕಾಣತೊಡಗಿದವು. ಕೊನೆಗೊಮ್ಮೆ ಎತ್ತೆತ್ತ ದೃಷ್ಟಿ ಹರಿಸಿದರೂ ಒಂದು ನರಪಿಳ್ಳೆ ಹೋಗಲಿ, ಕೊನೆಗೆ ಜೀವಂತ ಸಣ್ಣ ಕ್ರಿಮಿಕೀಟ ಅಥವಾ ಸಣ್ಣ ಹುಳಹುಪ್ಪಡಿ ಕೂಡ ಕಾಣಸಿಗದಾಯಿತು. ಒಂದು ಹಸುರು ಗರಿಕೆ ಕೂಡ ಕಂಡುಬರಲಿಲ್ಲ. ಇದು ಚಂದ್ರನ ಹೊರಮೈಯಿದ್ದಂತೆ ಇತ್ತು!'

ಸುಮಾರು 48 ವರ್ಷಗಳ ಹಿಂದೆ, ಅಂದರೆ 1975ರಲ್ಲಿ ವಿಯೆಟ್ನಾಮ್ ದೇಶದ (ಉತ್ತರ ವಿಯೆಟ್ನಾಮ್‌ನ ರಾಜಧಾನಿ ಹೊನೊಯ್) ಭಾರತೀಯ ರಾಯಭಾರಿ ಕಚೇರಿಯಲ್ಲಿ ಪ್ರಥಮ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದ ಮಧು ಭಾದುರಿ ಅವರು ವಿಯೆಟ್ನಾಮ್ ದೇಶದ ದಕ್ಷಿಣ ತುದಿಯಲ್ಲಿರುವ ಸೈಗಾನ್ ನಗರದ ಹತ್ತಿರವಿರುವ 'ಕು ಚಿ' ಎಂಬ ಪ್ರದೇಶಕ್ಕೆ ಭೇಟಿ ನೀಡಿದ್ದಾಗಿನ ಅನುಭವವನ್ನು ಈ ರೀತಿ ದಾಖಲಿಸಿದ್ದಾರೆ.

'ಕು ಚಿ ಹಿಂದೊಮ್ಮೆ ಒತ್ತಾಗಿ ಬೆಳೆದ ರಬ್ಬರ್ ಮರಗಳು ಮತ್ತು ಉದ್ದನೆಯ ಬಿದಿರುಮೆಳೆಗಳು ತುಂಬಿದ ನಿಬಿಡ ಅರಣ್ಯ ಪ್ರದೇಶವಾಗಿತ್ತು. ಅದರ ಕೆಳಗೆ ವಿಯೆಟ್ ಕಾಂಗ್‌ನವರು ಸುರಂಗಗಳನ್ನು ಕೊರೆದು ಯುದ್ಧಕಾಲೀನ ನೆಲೆ ಮಾಡಿಕೊಂಡಿದ್ದರು. ಅದಕ್ಕಾಗಿ ಈ ಊರು ಅಮೆರಿಕದವರ ಬಾಂಬುದಾಳಿಯ ಪ್ರಥಮ ಗುರಿಯಾಗಿತ್ತು. ಅಲ್ಲಿ ಏನಾದರೂ ನಾಶವಾಗದೇ ಉಳಿದಿದ್ದರೆ ಅದನ್ನು ಏಜೆಂಟ್ ಆರೆಂಜ್ ಎಂಬ ಭಯಾನಕ ರಾಸಾಯನಿಕದಿಂದ ಸುಟ್ಟುಬಿಡಲಾಗಿತ್ತು.

ಕು ಚಿಗೆ ಹೋಗಿ ಬಂದಂದಿನಿಂದ ನನ್ನ ಮನಸ್ಸಿನ ಶಾಂತಿ ಕದಡಿಹೋಗಿತ್ತು. ಒಬ್ಬ ಶಕ್ತಿಶಾಲಿ ವಿರೋಧಿಯನ್ನು ಪರಾಜಯಗೊಳಿಸುವುದು ಒಂದು ದೊಡ್ಡ ಸಾಧನೆಯೆಂಬುದೇನೋ ನಿಜ,